ಇವತ್ತು 5 ಶೂನ್ಯವೇಳೆಯ ವಿಚಾರವನ್ನು ತೆಗೆದುಕೊಂಡಿದ್ದೇನೆ. ನಾಳೆ ತಮಗೆ ಸಂಬಂಧಪಟ್ಟ ವಿಚಾರಗಳನ್ನು ತೆಗೆದುಕೊಳ್ಳಲಾಗುವುದು. ಪ್ರತಿದಿವಸ 3-4 ತೆಗೆದುಕೊಳ್ಳಬೇಕು. ಮಾನ್ಯ ಶಿವಪ್ಪನವರೇ ತಾವು ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ

ಅನುದಾನಿತ ಖಾಸಗಿ ಐ.ಟಿ.ಐ.ಗಳಿಗೆ ಪರಿಷ್ಕೃತ ವೇತನ ಆಯೋಗದ ವರದಿಯನ್ನು ಜಾರಿಗೊಳಿಸುವುದು.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೆ, ಅನುದಾನಿತ ಖಾಸಗಿ ಐಟಿಐಗಳಿಗೆ ಪರಿಷ್ಕೃತ 5ನೇ ವೇತನ ಆಯೋಗದ ವರದಿಯನ್ನು ಜಾರಿಗೊಳಿಸುವ ಬಗ್ಗೆ ಮಾನ್ಯ ರಾಜ್ಯ ಹಣಕಾಸು ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಶಿವಣ್ಣ (ರಾಜ್ಯ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ. ಖಾಸಗಿ ಐಟಿಐಗಳಿಗೆ ಅನುದಾನವನ್ನು ಕೊಡುವ ನಿರ್ಣಯವನ್ನು ನವೆಂಬರ್ 1997ರಲ್ಲಿ ತೆಗೆದುಕೊಳ್ಳಲಾಯಿತು. ಇದಕ್ಕೆ ಮುಂಚೆ ಖಾಸಗಿ ಐಟಿಐಗಳು ತಮ್ಮ ಅವಶ್ಯಕತೆಗಳನ್ನು ತಮ್ಮ ಸ್ವಂತ ಸಂಪನ್ಮೂಲಗಳಿಂದ ಭರಿಸುತ್ತಿದ್ದರು. ಅನುದಾನಿತ ಖಾಸಗಿ ಐಟಿಐ ಸಿಬ್ಬಂದಿಗಳಿಗೆ ಪರಿಷ್ಕೃತ 5ನೇ ವೇತನ ಆಯೋಗದ ವರದಿಯನ್ನು ದಿನಾಂಕ 1.7.2000ರಿಂದ ಜಾರಿಗೊಳಿಸಲು ಆರ್ಥಿಕ ಇಲಾಖೆ ಈಗಾಗಲೇ ಒಪ್ಪಿದೆ. ಶೇ. 15ರಷ್ಟು ಅನುದಾನವನ್ನು ಅನುದಾನಿತ ಸಂಸ್ಥೆಗಳಿಗೆ ಕಡಿತಗೊಳಿಸುವ ಸರ್ಕಾರದ ನೀತಿಯನ್ನು ಆಯವ್ಯಯ ಭಾಷಣದಲ್ಲಿ ಘೋಷಿಸಿರುವುದರಿಂದ ಹಾಗೂ ರಾಜ್ಯದ ಹಣಕಾಸಿನ ಕೊರತೆಯಿಂದ ಅನುದಾನಿತ ಖಾಸಗಿ ಐಟಿಐಗಳಿಗೆ ಶೇ. 75ರಿಂದ ಶೇ. 50ಕ್ಕೆ ಅನುದಾನವನ್ನು ಇಳಿಸಲು ಕಾರ್ಮಿಕ ಇಲಾಖೆಗೆ ತಿಳಿಸಲಾಗಿದೆ.

1.30 ಪಿ.ಎಂ.

+ ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಖಾಸಗಿ ಐಟಿಐ ಕಾಲೇಜುಗಳು ಏನಿವೆ ಅವು ಸರ್ಕಾರ ಎಲ್ಲ ಕಾಲೇಜುಗಳನ್ನು ನಡೆಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅಂತಹ ಕಡೆಗಳಲ್ಲಿ ಖಾಸಗಿ ಶಾಲಾ ಕಾಲೇಜುಗಳನ್ನು ನಡೆಸುವುದಕ್ಕೆ ಅವಕಾಶ ಕೊಟ್ಟು ಆವೊಂದು ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಆ ಪದ್ಧತಿ ಪ್ರಕಾರ ಹಲವಾರು ಖಾಸಗಿ ಕಾಲೇಜುಗಳು ಸಹಸ್ರಾರು ಜನಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಅನೇಕರು ಸರ್ಕಾರಿ ಕೆಲಸದಲ್ಲಿದ್ದುಕೊಂಡು ಸ್ವಂತ ಅವರದೇ ಆದ ಜೀವನವನ್ನು ನಡೆಸುತ್ತಿದ್ದಾರೆ. ಇಂತಹ ಒಂದು ಮಹತ್ತರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಶಾಲೆಗಳಲ್ಲಿ ವೇತನಕ್ಕಾಗಿ 1989ರಿಂದ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅದಕ್ಕೆ ಅನುಮತಿಯನ್ನು ಇತ್ತರು. ಅದು ಮಂತ್ರಿಮಂಡಲದಲ್ಲಿ ಕೂಡ ತೀರ್ಮಾನವಾಗಿದೆ. ಅದನ್ನು ಜಾರಿಗೊಳಿಸುವುದಕ್ಕೆ ಮೊದಲು ಚುನಾವಣೆ ಬಂದಿದ್ದರಿಂದ ಅದು ಅಲ್ಲಿಗೆ ತಡೆಯಾಯಿತು. ಆದರ ನಂತರ ಬಂದಂತಹ ಜನತಾದಳ

ಸರ್ಕಾರ ದಿನಾಂಕ 1.11.1997ರಲ್ಲಿ ಅನುದಾನದ ನಿಯಮಾವಳಿಗಳ ಪ್ರಕಾರ ಸರ್ಕಾರಿ ಸಿಬ್ಬಂದಿಗಳಿಗೆ ನೀಡುವ ಸವಲತ್ತುಗಳನ್ನು ಖಾಸಗಿ ಐಟಿಐ ಸಿಬ್ಬಂದಿಗೂ ನೀಡಲಾಗುವುದೆಂದು ಆಜ್ಞೆಯಾಯಿತು. ಇವತ್ತು 75 ಪರ್ಸೆಂಟ್ ಕೊಡುತ್ತಿದ್ದ ಅನುದಾನದಲ್ಲಿ 25 ಪರ್ಸೆಂಟ್ ಕಡಿಮೆ ಮಾಡಿ 50 ಪರ್ಸೆಂಟ್ ಮಾಡತಕ್ಕ ಉದ್ದೇಶವೇನು? ಹಿಂದಿನ ಸರ್ಕಾರ 75 ಪರ್ಸೆಂಟ್ ಅನುದಾನವನ್ನು ಜಾರಿಗೊಳಿಸಿತ್ತು. ಹಿಂದಿನ ಸರ್ಕಾರದ ಆದೇಶವನ್ನು ಸಚಿವ ಸಂಪುಟದ ಗಮನಕ್ಕೆ ತಾರದೆ ಅಧಿಕಾರಿಗಳು ಮಾರ್ಪಾಟು ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ಈಗ ಮಾನ್ಯ ಮಂತ್ರಿಗಳು ಅಧಿಕಾರಿಗಳು ಮಾಡಿರುವ ಮಾರ್ಪಾಟನ್ನು ಸರಿಪಡಿಸಿ ಸಚಿವ ಸಂಪುಟಕ್ಕೆ ಮತ್ತೆ ತೆಗೆದುಕೊಂಡು ಹೋಗುತ್ತಾರೆಂದು ನನ್ನ ಗಮನಕ್ಕೆ ಬಂದಿದೆ. ಅಂದಮೇಲೆ ಸರ್ಕಾರ ಮಾಡಿದಂತಹ ಆಜ್ಞೆಯನ್ನು, ಸಚಿವ ಸಂಪುಟದ ತೀರ್ಮಾನವನ್ನು ಅಧಿಕಾರಿಗಳು ಅದನ್ನು ಮಾರ್ಪಾಟು ಮಾಡಬಹುದೆ? ಅಧಿಕಾರಿ ಮಾಡಿದಂತಹ ಮಾರ್ಪಾಟನ್ನು ಬದಲಾಯಿಸಿ ಸರ್ಕಾರ ತನ್ನ ಆಜ್ಞೆಯನ್ನು ಎತ್ತಿ ಹಿಡಿಯುವುದಕ್ಕೆ ತೊಂದರೆ ಏನು ಎನ್ನುವುದನ್ನು ನಾನು ಇಲ್ಲಿ ಕೇಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಐಟಿಐ ಸಿಬ್ಬಂದಿಗಳಿಗೆ ಕೊಡತಕ್ಕ ಅನುದಾನ ಏನಿದೆ ಅದನ್ನು 75 ಪರ್ಸೆಂಟ್‌ಗಿಂತ ಕಡಿಮೆ ಮಾಡಬಾರದೆಂದು ನನ್ನ ಬೇಡಿಕೆ. ಬಜೆಟ್‌ನಲ್ಲಿ ಅದಕ್ಕಾಗಿ ಭಾರಿ ಹಣ ಖರ್ಚಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ಭಾಷಣ ಮಾಡಬೇಡಿ, ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ.ಬಿ. ಶಿವಪ್ಪ : ನಾನು ಕ್ಲಾರಿಫಿಕೇಶನ್ಸ್ ಕೇಳುತ್ತಿದ್ದೇನೆ. ಅನುದಾನವನ್ನು 75 ಪರ್ಸೆಂಟ್‌ಗೆ ನಿಲ್ಲಿಸಬೇಕು, ಅದನ್ನು ಕಟ್ ಮಾಡಬೇಡಿಯೆಂದು ಕೇಳುತ್ತಿದ್ದೇನೆ. ಕೊಡಬೇಕಾದ ಎಲ್ಲಾ ಸವಲತ್ತುಗಳನ್ನು ಕೊಡುವುದಕ್ಕೆ ಸರ್ಕಾರ ಹಿಂದೆ ಆರ್ಡರ್ ಪಾಸ್ ಮಾಡಿದೆ. ಅದು ಈ ರೀತಿ ಇದೆ :

The benefit of revised scale of pay will be extended to the employees of aided educational institutions who are on the said scales of pay and non-teaching staff of the universities. Orders in this behalf will be issued separately by the concerned administrative Department. ಈ ಆರ್ಡರನ್ನು ತಾವು ಯಾವ ಆಧಾರದ ಮೇಲೆ ಬದಲಾಯಿಸಿದ್ದೀರೋ ಗೊತ್ತಿಲ್ಲ. ಅದು ಹಾಗೆಯೇ ಇರಬೇಕು. 75 ಪರ್ಸೆಂಟ್ ಕಟ್ ಮಾಡಬಾರದು. ಕೊಡತಕ್ಕ ಸೌಲಭ್ಯಗಳಿಗೆ ಯಾವುದೇ ತೊಂದರೆಯಾಗಬಾರದೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕಡಿತಗೊಳಿಸಿದ್ದಾರೆಂದರೆ ಶಿಕ್ಷಣ ಸಂಸ್ಥೆಗಳಿಗೆ ಕೊಡತಕ್ಕ ಅನುದಾನದಲ್ಲಿ ಶೇಕಡ 15ರಷ್ಟು ಕಡಿತ ಮಾಡಬೇಕೆಂದು ಸರ್ಕಾರದ ನೀತಿ ಇದೆ. ಸರ್ಕಾರದ ನೀತಿಯ ಪ್ರಕಾರ ಅವೊಂದು ಹಿನ್ನೆಲೆಯಲ್ಲಿ ಇದನ್ನು ಜಾರಿಗೊಳಿಸಲಾಗಿದೆ. ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸುವುದಕ್ಕೆ ದಿನಾಂಕ 1.7.2000ರಂದು ಆರ್ಥಿಕ ಇಲಾಖೆ ಒಪ್ಪಿಗೆ ಕೊಟ್ಟಿದೆ. ಸರ್ಕಾರದ ನೀತಿ ಏನಿದೆ ಅಂದರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಶೇಕಡ 15ರಷ್ಟು ಅನುದಾನವನ್ನು ಕಟ್ ಮಾಡಬೇಕೆಂದು ಬಜೆಟ್ ಭಾಷಣದಲ್ಲಿ

ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ಹಣಕಾಸಿನ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ಅನುದಾನವನ್ನು ಕಡಿತ ಮಾಡತಕ್ಕ ಸಂದರ್ಭದಲ್ಲಿ ಐಟಿಐ ಸಂಸ್ಥೆಗಳು ಸಹ ಇದರಲ್ಲಿ ಅಪೈಯಾಗಿವೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ಹೇಳುವುದಾದರೆ, ನಮ್ಮಲ್ಲಿ ಐಟಿಐಗಳು, ಸುಮಾರು 324 ಸಂಸ್ಥೆಗಳು ಇವೆ. ಅದರಲ್ಲಿ ಈಗಾಗಲೇ ಅನುದಾನಕ್ಕೆ ಒಳಪಟ್ಟಿರತಕ್ಕವು 112 ಐಟಿಐ ಸಂಸ್ಥೆಗಳು. ಅಲ್ಲಿರತಕ್ಕ ಸಿಬ್ಬಂದಿಗಳಿಗೆ ಅನುದಾನವನ್ನು ಕೊಡುತ್ತಿದ್ದೇವೆ. ಹಣಕಾಸು ಮಿತಿಗೊಳಿಸುವ ದೃಷ್ಟಿಯಲ್ಲಿ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ದೃಷ್ಟಿಯಿಂದ ಇದು ಆಗಿದೆಯೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರ ಅವರಿಗೆ ಶೇಕಡ ನೂರರಷ್ಟು ಅನುದಾನ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಆವೊತ್ತು ಶೇಕಡ ನೂರರಷ್ಟು ಅನುದಾನ ಕೊಟ್ಟಿದ್ದರೆ ಅದರಲ್ಲಿ ಶೇಕಡ 15 ರಿಂದ 10ರಷ್ಟು ತೆಗೆದು 75 ಪರ್ಸೆಂಟ್ ಕೊಡಬಹುದಿತ್ತು. ಅದರ ನಂತರ ಬಂದಂತಹ ಸರ್ಕಾರ ಅನುದಾನವನ್ನು 75 ಪರ್ಸೆಂಟ್‌ಗೆ ಇಳಿಸಿತು. ಪುನಃ ಅದರಲ್ಲಿ 25 ಪರ್ಸೆಂಟ್ ತೆಗೆಯುತ್ತೇವೆಂದರೆ ಅದು ಸರಿಯಲ್ಲವೆಂದು ನನ್ನ ಆಕ್ಷೇಪಣೆ. ಈ ಬಗ್ಗೆ ಮಾನ್ಯ ಶ್ರೀಕಂಠಯ್ಯನವರು ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ 'ಇದನ್ನು ಪರಿಶೀಲಿಸಿ' ಎಂದು ತಮಗೆ ಪತ್ರ ಬರೆದಿದ್ದಾರೆ. ಇದೆಲ್ಲ ಆಧಾರವನ್ನು ಇಟ್ಟುಕೊಂಡು ಅವರಿಗೆ ಕೊಡತಕ್ಕ ಅನುದಾನದಲ್ಲಿ ಕಟ್ ಮಾಡಬಾರದೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು : ಮಾನ್ಯ ಅಭಯಚಂದ್ರರವರು, ಸದಸ್ಯರು ಗೈರುಹಾಜರು ಇದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ಏಪ್ರಿಲ್ ತಿಂಗಳಿನಲ್ಲಿ ಕೇಳಿದ ಪ್ರಶ್ನೆಗೆ ಇವತ್ತು ಲಿಖಿತ ಉತ್ತರ ಬರುತ್ತಿದೆ. ಕಳೆದ ಅಧಿವೇಶನದಲ್ಲಿ ನಾನು ಕೇಳಿದ ಪ್ರಶ್ನೆ ಚುಕ್ಕೆರಹಿತ ಪ್ರಶ್ನೆಯಾಗಿ ಬಂತು. ಅದಕ್ಕೆ ಉತ್ತರ ನವೆಂಬರ್‌ನಲ್ಲಿ ಬರುತ್ತಿದೆ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಮಾನ್ಯ ಫೋರ್ಡೆಯವರು ತಿದ್ದುಪಡಿ ಮಸೂದೆಯನ್ನು ಮಂಡಿಸಬೇಕು.

ಶಾಸನ ರಚನೆ

ವಿಧೇಯಕ ಮಂಡನೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಮಂಡಿಸುತ್ತೇನೆ.